

# ಕನಸೊಂದು ಶುರುವಾಗಿದೆ...

ಗೋವಾದಿಂದ ಮರಳಿ ಬಂದಿರುವ ಕಾಸರವಳ್ಳಿ ಅವರ ಕನಸು ಈಗ ಪ್ರೇಕ್ಷಕರ ಎದುರು ಬರುತ್ತಿದೆ. ಡಿಸೆಂಬರ್ 10ರಂದು 'ಕನಸೆಂಬ ಕುದುರೆಯನೇರಿ' ಚಿತ್ರ ಬಿಡುಗಡೆ ಮಾಡಲು ನಿರ್ಮಾಪಕ ಬಸಂತಕುಮಾರ್ ಪಾಟೀಲ್ ಸಿದ್ಧತೆ ನಡೆಸಿದ್ದಾರೆ. ಹಾಗಾಗಿ, ಕಾಸರವಳ್ಳಿ ಅವರ ಕನಸು ಮತ್ತಷ್ಟು ಸಹೃದಯರ ಕನಸೂ ಆಗಲಿದೆ.

ಗೋವಾ ಚಿತ್ರೋತ್ಸವ ಹೇಗಿತ್ತು?

ಪ್ರಶ್ನೆಯ ಬೆನ್ನಿಗೇ, ಗಿರೀಶ್ ಕಾಸರವಳ್ಳಿ ಅವರು ಒಂದೇ ಮಾತಿನಲ್ಲಿ ಹೇಳಿದ್ದು– 'ಮಜಾ ಇರಲಿಲ್ಲ'.

'ಔಪಚಾರಿಕತೆಗಾಗಿ, ಮಾಡಬೇಕು ಮಾಡ್ತಿದ್ದೇವೆ ಎನ್ನುವ ಧಾಟಿಯಲ್ಲಿ ಚಿತ್ರೋತ್ಸವ ಮಾಡಿದಂತೆ ಕಾಣಿಸ್ತಿದೆ. ಜನರೂ ಕಡಿಮೆ. ತುಂಬಾ ಅಧ್ವಾನಗಳಿರುವಾಗ ಜನರಾದ್ರೂ ಯಾಕೆ ಬರ್ತಾರೆ. ಇತರೆಡೆಗಳಲ್ಲಿ, ಕಡಿಮೆ ಜನರು ತೊಡಗಿಕೊಂಡು ಮಾಡುವ ಚಿತ್ರೋತ್ಸವಗಳು ತುಂಬಾ ಚೆನ್ನಾಗಿರುತ್ತವೆ. ಇಲ್ಲಿ, ಮಾನವ ಸಂಪನ್ಮೂಲದ ಸಮಸ್ಯೆಯಿಲ್ಲ. ಹಣದ ಸಮಸ್ಯೆಯಿಲ್ಲ. ಚಿತ್ರೋತ್ಸವವನ್ನು ಯಾಕೆ ನೀಟಾಗಿ ಮಾಡಲಿಕ್ಕೆ ಆಗ್ತಿಲ್ಲ ಅನ್ನೋದೆ ಗೊತ್ತಾಗ್ತಿಲ್ಲ'.

ಕಾಸರವಳ್ಳಿ ಅವರ ಮಾತುಗಳಲ್ಲಿ ಚಿತ್ರೋತ್ಸವದ ಬಗ್ಗೆ ಬೇಸರ ಸ್ಪಷ್ಟವಾಗಿತ್ತು. ಚಿತ್ರೋತ್ಸವದ ಕಾಯಂ ಆತಿಥ್ಯವನ್ನು ಗೋವಾಕ್ಕೆ ತಪ್ಪಿಸಬೇಕು ಎನ್ನುವ ಮಾತುಗಳು ಈಚೆಗೆ ದಟ್ಟವಾಗುತ್ತಿವೆಯಲ್ಲ; ಅದರ ಬಗ್ಗೆ ಪ್ರತಿಕ್ರಿಯಿಸಿದ ಕಾಸರವಳ್ಳಿ– 'ಚಿತ್ರೋತ್ಸವದ ಸ್ಥಳ ಚೇಂಜ್ ಆಗುತ್ತೆ ಎನ್ನುವ ಬಲವಾದ ಸುದ್ದಿ ಇದೆ. ಬದಲಾವಣೆ ಆದರೆ ಒಂದುರೀತಿಯಲ್ಲಿ ಒಳ್ಳೆಯದೇ. ಭಿನ್ನವಾದ ಟ್ರಾವೆಲಿಂಗ್‌ನ ಅನುಭವವಾದರೂ ದೊರೆಯುತ್ತೆ. ಆದರೆ, ಗೋವಾದಲ್ಲಿ ಪ್ರತಿವರ್ಷವೂ ಚಿತ್ರೋತ್ಸವಗಳನ್ನು ನಡೆಸುವ ತೀರ್ಮಾನ ಆದದ್ದು ಒಳ್ಳೆಯ ಉದ್ದೇಶದಿಂದಲೇ. ಪ್ರಯಾಣದಲ್ಲಿನ ಗೊಂದಲಗಳನ್ನು ತಪ್ಪಿಸುವುದು ಹಾಗೂ ಸಿನಿಮಾ ಪ್ರದರ್ಶಗಳನ್ನು ವ್ಯವಸ್ಥಿತವಾಗಿ ನಡೆಸುವ ಹಿನ್ನೆಲೆಯಲ್ಲಿ ಒಂದೇ ಸ್ಥಳ ಒಳ್ಳೆಯದೆಂದು ಭಾವಿಸಲಾಗಿತ್ತು. ಆ ಉದ್ದೇಶ ಈಡೇರಿದಂತಿಲ್ಲ'.

ಚಿತ್ರೋತ್ಸವದ ಸ್ಥಳಪುರಾಣದಿಂದ ಕಾಸರವಳ್ಳಿ ಅವರ ಸಿನಿಮಾದತ್ತ ಮಾತು ಬದಲಾಯಿತು. ಅವರ ನಿರ್ದೇಶನದ, ಅಮರೇಶ ನುಗಡೋಣಿ ಅವರ ಸಣ್ಣಕಥೆ ಆಧರಿತ 'ಕನಸೆಂಬ ಕುದುರೆಯನೇರಿ' ಚಿತ್ರ ಬೇರೆ ಬೇರೆ ಚಿತ್ರೋತ್ಸವಗಳ ಪ್ರದಕ್ಷಿಣೆಯ ನಂತರ, ಗೋವಾ ಚಿತ್ರೋತ್ಸವದಲ್ಲಿ ಪ್ರದರ್ಶನ ಕಂಡಿದೆ. ಈ ಪ್ರದರ್ಶನದಲ್ಲಿ ಪ್ರೇಕ್ಷಕರಿಂದ ದೊರೆತ ಅದ್ಭುತ ಪ್ರತಿಕ್ರಿಯೆ ಕಾಸರವಳ್ಳಿ ಅವರಿಗೆ ಖುಷಿ ತಂದಿದೆ. ಈ ಖುಷಿಯ ನಡುವೆಯೂ ಸಣ್ಣದೊಂದು ಕಹಿಯಿದೆ. ಪ್ರದರ್ಶನದ ಸಂದರ್ಭದಲ್ಲಿ ಆಯಾ ಚಿತ್ರದ ನಿರ್ದೇಶಕರಿಗೆ ಮಾತನಾಡಲು ಅವಕಾಶ ನೀಡುವುದು ಸಂಪ್ರದಾಯ. ಇಂಥ ಅವಕಾಶ ಕಾಸರವಳ್ಳಿ ಅವರಿಗೆ ಈ ಸಲ ದೊರೆತಿಲ್ಲ. ಅವಕಾಶ ಕೇಳಿ ಪಡೆಯುವ ಜಾಯಮಾನ ಅವರದಲ್ಲ. ಇದನ್ನೊಂದು ದೊಡ್ಡ ವಿಷಯವೆಂದು ಅವರು ಭಾವಿಸದಿದ್ದರೂ, ಚಿತ್ರೋತ್ಸವದ ಗೊಂದಲಗಳಿಗೆ ಈ ಪ್ರಸಂಗವೂ ಒಂದು ಉದಾಹರಣೆಯಂತಿದೆ.

'ಪ್ರಮುಖ ಚಿತ್ರೋತ್ಸವಗಳಲ್ಲಿ ನಿರ್ದೇಶಕರು ಬರುವುದು ಒಂದು ದೊಡ್ಡ ಇವೆಂಟ್ ಆಗಿರುತ್ತದೆ. ನಿರ್ದೇಶಕರೊಂದಿಗಿನ ಸಂವಾದಕ್ಕೆ ಪ್ರೇಕ್ಷಕರೂ ಉತ್ಸಾಹ ವ್ಯಕ್ತಪಡಿಸುತ್ತಾರೆ. ಗೋವಾದಲ್ಲಿ ಹೀಗಾಗುತ್ತಿಲ್ಲ. ಅಲ್ಲಿ, ಹಿಂದಿ ನಟನಟಿಯರು ಬಂದರೆ ದೊಡ್ಡ ಇವೆಂಟ್ ಆಗುತ್ತೆ. ಇತರ ಭಾಷೆಯವರು ಅಲ್ಲಿಯೇ ಓಡಾಡುತ್ತಿರುತ್ತಾರೆ. ಅದು ಯಾರ ಗಮನಕ್ಕೂ ಬಂದಿರುವುದಿಲ್ಲ' ಎನ್ನುವ ಕಾಸರವಳ್ಳಿ ಮಾತು ಧ್ವನಿಸುವುದೂ ಚಿತ್ರೋತ್ಸವದ ಅವ್ಯವಸ್ಥೆಯನ್ನೇ.

ಗೋವಾದಿಂದ ಮರಳಿ ಬಂದಿರುವ ಕಾಸರವಳ್ಳಿ ಅವರ ಕನಸು ಈಗ ಪ್ರೇಕ್ಷಕರ ಎದುರು ಬರುತ್ತಿದೆ. ಡಿಸೆಂಬರ್ 10ರಂದು 'ಕನಸೆಂಬ ಕುದುರೆಯನೇರಿ' ಚಿತ್ರ ಬಿಡುಗಡೆ ಮಾಡಲು ನಿರ್ಮಾಪಕ ಬಸಂತಕುಮಾರ್ ಪಾಟೀಲ್ ಸಿದ್ಧತೆ ನಡೆಸಿದ್ದಾರೆ. ಹಾಗಾಗಿ, ಕಾಸರವಳ್ಳಿ ಅವರ ಕನಸು ಮತ್ತಷ್ಟು ಸಹೃದಯರ ಕನಸೂ ಆಗಲಿದೆ.

ಕನಸು ತೆರೆಕಾಣುತ್ತಿರುವ ಸಂದರ್ಭದಲ್ಲೇ ಕಾಸರವಳ್ಳಿ ಅವರು ಮತ್ತೊಂದು ಸಿನಿಮಾ ಮಾಡುವ ಬಗ್ಗೆ ಯೋಚಿಸುತ್ತಿದ್ದಾರೆ. ಕೌಟುಂಬಿಕ ತಲ್ಲಣಗಳು, ಓಡಾಟ, ಗೊಂದಲದ ಮನಸ್ಥಿತಿಯಿಂದಾಗಿ 'ಕನಸೆಂಬ ಕುದುರೆಯನೇರಿ' ನಂತರ ಹೊಸ ಚಿತ್ರದಲ್ಲಿ ತೊಡಗಿಸಿಕೊಳ್ಳುವುದು ಅವರಿಗೆ ಸಾಧ್ಯವಾಗಿರಲಿಲ್ಲ. ನಾಲ್ಕೈದು ಪ್ರಾಜೆಕ್ಟ್‌ಗಳೇನೊ ತಲೆಯಲ್ಲಿವೆ. 2011ರಲ್ಲಿ ಮತ್ತೊಂದು ಚಿತ್ರದಲ್ಲಿ ಮುಳುಗಿಹೋಗುವ ಉದ್ದೇಶ ಕಾಸರವಳ್ಳಿ ಅವರದ್ದು.

★ ರಚಹ